Indian Journal of History and Archaeology

ISSN (E):2582-225X
Vol-1 Issue 2, July- August 2019, Pp 55-59

# ಜನಪದ ಕರಕುಶಲ ಹಾಗೂ ಪ್ರದರ್ಶನ ಕಲಾವಿದರಿಗೂ ಇರುವ ಪೂರಕ ಸಂಬಂಧಗಳು: ಉದ್ಯೋಗ ಸೃಷ್ಟಿಯ ಹೊಸ ಮಾರ್ಗ

**ವಿಜಯ್ ಆರ್.ಟಿ.**

**ವಿಜಯ್ ಆರ್ ಟಿ.**
ಸಂಶೋಧನಾ ವಿದ್ಯಾರ್ಥಿ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ
ಹಾವೇರಿ ಜಿಲ್ಲೆ-೫೮೧ ೧೯೭
ಮೊ: 9986700032

## ಪೀಠಿಕೆ

ಶಿಕ್ಷಣವು ಜನರಿಗೆ ನೈಪುಣ್ಯತೆ, ಕೌಶಲ್ಯ ಮತ್ತು ಪರಿಣತಿಯನ್ನು ಒದಗಿಸುತ್ತದೆ. ಇದರಿಂದಾಗಿ ಜನರು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ ಅಭಿವೃದ್ಧಿಗೆ ಪೂರಕವಾದ ಚಟುವಟಿಕೆಗಳನ್ನು ಕೈಗೊಳ್ಳಲು ನೇರವಾಗುತ್ತದೆ. ಕರಕುಶಲ ಕಲೆಗಳು ಆಧುನಿಕ ಉದ್ಯೋಗ ಕ್ಷೇತ್ರವನ್ನು ಪ್ರವೇಶಿಸುತ್ತಿವೆ. ಜನಪದರ ಜೀವನದೊಂದಿಗೆ ಹಾಸುಹೊಕ್ಕಾಗಿದ್ದ ಕುಶಲತೆ ದಿನೇ ದಿನೇ ಉದ್ಯಮ ರೂಪವನ್ನು ಪಡೆದುಕೊಳ್ಳುತ್ತಾ ಸಾಗುತ್ತಿದೆ. ಪರಂಪರಾನುಗತ ಕಲೆಗೆ ಚ್ಯುತಿ ಬಾರದಂತೆ ವಿಸ್ತರಿಸಿಕೊಳ್ಳುತ್ತಾ, ಕಲೆಯ ಜೀವಂತಿಕೆಯ ಜೊತೆ ಜೊತೆಗೆ ಉದ್ಯೋಗವನ್ನು ಸ್ವಯಂ ಸೃಷ್ಟಿಸಿಕೊಳ್ಳುತ್ತಾ ಹೋಗುತ್ತಿದೆ. ತನ್ಮೂಲಕ ನವ ಕುಶಲಕರ್ಮಿಗಳನ್ನು ತನ್ನತ್ತ ಆಕರ್ಷಿಸುತ್ತಿದೆ.

ಸುಶಿಕ್ಷಿತರು ಸರ್ಕಾರದ ಹಾಗೂ ಖಾಸಗಿ ಸಂಸ್ಥೆಗಳು ನೀಡುವ ತರಬೇತಿ ಪಡೆದುಕೊಂಡು ಕುಶಲ ಕಲಾ ವಲಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸುತ್ತಿರುವುದು ಸ್ವಾಗತಾರ್ಹ ವಿಷಯ. ಕರಕುಶಲ ವಸ್ತುಗಳು ನೋಡುಗರನ್ನು ಆಕರ್ಷಿಸುತ್ತವೆ. ಈ ಆಕರ್ಷಣೆಯು ಉದ್ಯೋಗ ಸೃಷ್ಟಿಗೆ ಮೂಲ ಪ್ರೇರಣೆಯಾಗುತ್ತಿದೆ. ವಿದೇಶಿಗರನ್ನು

ಸೂಜಿಗಲ್ಲಿನಂತೆ ಸೆಳೆಯುತ್ತಿರುವ ಕರಕುಶಲ ಕಲೆಗಳು ಕಲಾವಿದರ ಬದುಕಿಗೆ ಭದ್ರವಾದ ಆರ್ಥಿಕ ನೆಲೆಗಟ್ಟನ್ನು ಒದಗಿಸಿಕೊಡುತ್ತಿವೆ.

ಕಣ್ಮರೆಯಾಗುತ್ತಿದ್ದ ಕೆಲ ಕಲೆಗಳೂ ಇದೀಗ ಬೆಳಕಿಗೆ ಬರುತ್ತಿವೆ. ಒಂದು ರೀತಿಯ ಪುನಶ್ಚೇತನವೆಂದರೆ ಅತಿಶಯೋಕ್ತಿಗಲಾರದು. ಕರಕುಶಲಿಗಳು ಒಂದೆಡೆ ಕಲೆಗಳ ಪುನಶ್ಚೇತನ ಕಾರ್ಯದಲ್ಲಿ ತೊಡಗಿದ್ದರೆ, ಮತ್ತೊಂದೆಡೆ ಸರ್ಕಾರ ಸೂಕ್ತ ರೀತಿಯ ಉತ್ಸಾಹ ತೋರದೆ, ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಉದ್ಯೋಗ ಸೃಷ್ಟಿಯ ಕೂಗು ಇನ್ನಿತರ ಕ್ಷೇತ್ರಗಳಲ್ಲಿ ಉಂಟಾಗುತ್ತಿರುವಂತೆ, ಕಲಾವಲಯಕ್ಕೂ ವಿಸ್ತರಿಸಿಕೊಳ್ಳಬೇಕು. ಹಾಗಾದಾಗ ಮಾತ್ರವೇ ಕಲೆ ಮತ್ತು ಕಲಾವಿದ ಉಳಿಯಲು ಸಾಧ್ಯ .

ಜನಪದ ಕಲೆಗೂ ಕಲಾವಿದನಿಗೂ ತೀರದ ನಂಟು. ಜನಪದ ಕರಕುಶಲ ಕಲಾವಿದನ ಹಸ್ತ ಕೌಶಲ್ಯದಿಂದ ಮುಡಿದ ಸೋಮನ ಮುಖವಾಡಗಳು, ಹುಲಿಮುಖವಾಡ, ಕೆಂಚಣ್ಣ ಮತ್ತು ಕರಿಯಣ್ಣನ ಹರಿಗೆಗಳು, ಹುಲಿವಾಹನ , ವೀರಭದ್ರನ ಹಲಗೆ, ನಂದಿಧ್ವಜ, ಚರ್ಮ ವಾದ್ಯಗಳಾದ ಡೊಳ್ಳು, ಊದು ವಾದ್ಯಗಳು, ತಂತಿ ವಾದ್ಯಗಳು ಇತ್ಯಾದಿಗಳನ್ನು ಪ್ರದರ್ಶನ ಕಲಾವಿದ ಬಳಸುತ್ತಾನೆ.

ಮೂಲ ಸಂಸ್ಕೃತಿಗೆ ಚ್ಯುತಿ ಬಾರದಂತೆ ಪ್ರದರ್ಶನ ವಸ್ತುಗಳನ್ನು ತಯಾರಿಸಿಕೊಡುವ ಮೂಲಕ ಜನಪದ ಕರಕುಶಲ ಮತ್ತು ಪ್ರದರ್ಶನ ಕಲಾವಿದರಿಗೂ ಪರಸ್ಪರ ಪೂರಕ ಸಂಬಂಧಗಳು ಏರ್ಪಡುತ್ತವೆ. ಪ್ರದರ್ಶಕ ಕಲಾವಿದ ಹಾಗೂ ಕರಕುಶಲ ಕಲಾವಿದರ ನಡುವಿನ ಸಂಬಂಧಕ್ಕೆ ಈ ಕೆಳಕಂಡ ಅಂಶಗಳು ಸಾಕ್ಷಿಯಾಗುತ್ತವೆ. ತನ್ಮೂಲಕ ನೂತನ ಉದ್ಯೋಗಗಳ ಸೃಷ್ಟಿಗೆ ಕಾರಣವಾಗುತ್ತಿವೆ.

- ನಾಟಕದ ಸೀನರಿಗಳ ನಿರ್ಮಾಣ, ನಾಟಕ ಕಲಾವಿದರ ಕಿರೀಟ, ಭುಜಕೀರ್ತಿ, ಆಭರಣಗಳು, ವಿಗ್ ಇತ್ಯಾದಿಗಳನ್ನು ಕರಕುಶಲ ಕಲಾವಿದ ನಿರ್ಮಿಸಿ ಕೊಡುತ್ತಾನೆ. ಹೀಗೆ ನಾಟಕ ರಂಗ ಸಜ್ಜಿಕೆಯನ್ನು ಅಣಿಗೊಳಿಸುವಲ್ಲಿ ಕರಕುಶಲಿಯ ಕೈಚಳಕ ಇದ್ದೇ ಇರುತ್ತದೆ.
- ಸೋಮನ ಮುಖವಾಡಗಳು ಹಗುರವಾಗಿರಲೆಂದು ರಕ್ತ ಭೂತಾಳೆ, ದೇವಭೂತಾಳೆ ಅಥವಾ ಹತ್ತಿಯ ಮರದಿಂದ ನಿರ್ಮಿಸಲಾಗುತ್ತದೆ. ಮೂಲ ಸಂಸ್ಕೃತಿಗೆ ಧಕ್ಕೆಯಾಗದಂತೆ ಮುಖವಾಡಗಳನ್ನು ಕರಕುಶಲಿಗ ಮಾಡಿಕೊಡುತ್ತಾನೆ.
- ವೀಣೆ, ತಂಬೂರಿ, ಹಾರ್ಮೋನಿಯಂ, ಕಂಡಾಯ ಇತ್ಯಾದಿಗಳು ಕರಕುಶಲಿಗನ ತಂತ್ರಜ್ಞಾನದಿಂದ ರೂಪುಗೊಳ್ಳುತ್ತವೆ.

- ದಮ್ಮಡಿ, ಗುಮ್ಮಟೆ, ಘಟಂ, ತಬಲ, ತಮಟೆ, ನಗಾರಿ, ಡೊಳ್ಳು, ತಾರಸಿ, ದುಡಿ, ಹೆಬ್ಬರೆ ಮುಂತಾದ ಚರ್ಮವಾದ್ಯಗಳು ಪ್ರದರ್ಶನ ಮತ್ತು ಕರಕುಶಲ ಕಲಾವಿದನ ನಡುವೆ ಸಂಬಂಧಗಳನ್ನು ಏರ್ಪಡಿಸುತ್ತವೆ.
- ಪ್ರದರ್ಶನ ಕಲೆಯಲ್ಲಿ ಬಳಸುವ ಲೋಹದಿಂದ ತಯಾರಿಸಿದ ವೀರಭದ್ರನ ಹಲಗೆ, ಕತ್ತಿ, ಗುರಾಣಿ, ನಡುವಿನ ಡಾಬು, ತೋಳುಬಂಧಿ, ಕಡಗ, ಕಿರೀಟ, ಮುಂಗೈ ಒಡವೆ ಇತ್ಯಾದಿಗಳು ಸಹ ಕರಕುಶಲ ಕಲಾವಿದ ತಯಾರಿಸುವ ವಸ್ತುಗಳೇ ಆಗಿರುತ್ತವೆ.
- ದೇವರ ಮುಖವಾಡಗಳು, ಆಭರಣಗಳು, ದಂಡ, ಪೂಜಾ ಕುಣಿತದಲ್ಲಿ ಬಳಸುವ ದೇವರ ಉತ್ಸವ ಮೂರ್ತಿ, ಕಳಸ, ಗೆಜ್ಜೆ ಸರ ಇತ್ಯಾದಿಗಳು.
- ಊರ ಹಬ್ಬಗಳಂದು ಪ್ರದರ್ಶನಗೊಳ್ಳುವ ಹುಲಿವಾಹನ, ಹುಲಿಯ ಮುಖವಾಡ, ಗಾರುಡಿ ಗೊಂಬೆಗಳು, ವೀರಭದ್ರನ ಆಭರಣಗಳು ಹಾಗೂ ಇತ್ನಿತರ ಮುಖವಾಡಗಳು ಇತ್ಯಾದಿ.

- ಸಿನಿಮಾದಿಂದ ಪ್ರೇರಿತವಾದ ಕಲಾವಿದ ವೀರಬಾಹುವಿನ ಪಾತ್ರವನ್ನು ಪ್ರದರ್ಶನ ಕಲೆಯಾಗಿ ಮಾರ್ಪಾಡು ಮಾಡಿಕೊಂಡು ಗಣೇಶೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಇನ್ನಿತರ ಕಾರ್ಯಕ್ರಮಗಳಲ್ಲಿ ಪ್ರದರ್ಶನ ನೀಡುತ್ತಿರುವುದು ರಾಮನಗರ ಜಿಲ್ಲೆಯಲ್ಲಿ ಇತ್ತೀಚೆಗೆ ಕಂಡು ಬರುತ್ತಿದೆ. ಆ ಪಾತ್ರಧಾರಿಗೆ ಬೇಕಾಗುವ ಒಡವೆಗಳು ಹಾಗೂ ವಿಗ್‌ಗಳನ್ನು ಸ್ಥಳೀಯ ಕರಕುಶಲ ಕಲಾವಿದರು ನಿರ್ಮಿಸಿಕೊಡುತ್ತಿದ್ದಾರೆ.

**ಭವಿಷ್ಯದ ಮುನ್ನಂದಾಜು:** ಸಮಾಜದ ವಿವಿಧ ವರ್ಗಗಳನ್ನು ಗುರುತಿಸಿ ಭವಿಷ್ಯದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಂಭವಿಸಬಹುದಾದ ಬದಲಾವಣೆಗಳನ್ನು ಈಗಾಗಲೇ ಅಂದಾಜಿಸಲು ಮುಂದಾಗಬೇಕು. ಕರಕುಶಲ ವಸ್ತುವಿನ ಮಾರುಕಟ್ಟೆಯ ಭವಿಷ್ಯದಲ್ಲಾಗುವ ಬದಲಾವಣೆಗಳನ್ನು ಹಿಂದಿನ ಮತ್ತು ಈಗಿನ ಅಂಕಿಅಂಶಗಳನ್ನು ಆಧರಿಸಿ ಭವಿಷ್ಯದ ಮಾರುಕಟ್ಟೆ ಹೇಗಿರಬಹುದೆಂಬುದನ್ನು ಅಂದಾಜಿಸಿದಾಗ ಕರಕುಶಲ ಕಲಾವಿದರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅರಿವಾಗುತ್ತದೆ. ಸರ್ಕಾರದ ಹೊಸ ಹೊಸ ಸುಧಾರಣೆಗಳು ಉದ್ಯೋಗಾವಕಾಶಗಳನ್ನು ನಿರೀಕ್ಷಿತ ಪ್ರಮಾಣದಲ್ಲಿ ಸೃಷ್ಟಿಸಿಲ್ಲ. ಇದಕ್ಕೆ ಕಾರಣ ಆಧುನಿಕ ಯಂತ್ರೋಪಕರಣಗಳನ್ನು ಬಳಸುವುದಾಗಿದೆ.

ಕರಕುಶಲ ಕಲೆಯ ತರಬೇತಿಯು ಜನರಿಗೆ ನೈಪುಣ್ಯತೆ, ಕೌಶಲ್ಯ ಮತ್ತು ಪರಿಣತಿಯನ್ನು ಒದಗಿಸುತ್ತದೆ. ಇದರಿಂದಾಗಿ ಜನರು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ. ತನ್ಮೂಲಕ ಸಾಮಾಜಿಕ

ಸುಧಾರಣೆಯಾಗುವುದಲ್ಲದೇ ದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ. ಭೌತಿಕ ಬಂಡವಾಳದ ಬೆಳವಣಿಗೆಯು ಬಹುತೇಕವಾಗಿ ಮಾನವ ಬಂಡವಾಳ ಸಂಚಯನವನ್ನು ಆಧರಿಸಿದೆ. ಆದುದರಿಂದ ಮಾನವ ಬಂಡವಾಳವು ಬೌದ್ಧಿಕ ಬಂಡವಾಳಕ್ಕೆ ಪೂರಕವಾಗುತ್ತದೆ. ಮಾನವ ಬಂಡವಾಳದ ಸಂಚಯನವನ್ನು ಕೌಶಲ್ಯಯುಕ್ತವಾಗಿ ಪರಿವರ್ತಿಸಿ ಪ್ರಚ್ಛನ್ನ ನಿರುದ್ಯೋಗದ ಸಮಸ್ಯೆಯನ್ನು ನಿವಾರಿಸಬಹುದಾಗಿದೆ. ಸಾಕಷ್ಟು ಮಾನವ ಬಂಡವಾಳ ಹೊಂದಿರುವ ನಮ್ಮ ದೇಶದಲ್ಲಿ ಬೌದ್ಧಿಕ ಬಂಡವಾಳವನ್ನು ಹೆಚ್ಚು ಸಮರ್ಥವಾಗಿ ಬಳಸಿಕೊಂಡು ಕರಕುಶಲ ವಸ್ತುಗಳ ಉತ್ಪಾದನೆ ಹೆಚ್ಚಿಸಬಹುದು. ಗ್ರಾಮೀಣಾಭಿವೃದ್ಧಿಯ ಕಾರ್ಯಕ್ರಮಗಳು ಜನರನ್ನು ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಅವರ ಆದಾಯವನ್ನು ಹೆಚ್ಚಿಸುತ್ತವೆ. ಆದಾಯದ ಹೆಚ್ಚಳದ ಮೂಲಕ ಅನುಭೋಗದ ಪ್ರಮಾಣ, ಜನರ ಜೀವನಮಟ್ಟವನ್ನು ಉತ್ತಮಪಡಿಸಿಕೊಳ್ಳುವ ಮೂಲಕ ಬಡತನ ನಿವಾರಿಸಬಹುದು.

## ಉಪಸಂಹಾರ

ಕಲೆ ಮತ್ತು ಉದ್ಯೋಗ ಅಥವಾ ಉದ್ಯೋಗದಲ್ಲಿ ಕಲೆ ಎಂದು ಭಾವಿಸಿಕೊಂಡಾಗ ಎಲ್ಲ ಉದ್ಯಮಗಳಲ್ಲೂ ಕಲೆಯ ಅವಶ್ಯಕತೆ ಇರುವುದನ್ನು ಮನಗಾಣಬಹುದು. ನಮ್ಮ ಕರಕುಶಲ ಕರ್ಮಿಗಳು ಇಂದಿಗೂ ತಮ್ಮ ಹಸ್ತ ಕೌಶಲ್ಯದಿಂದ ಸಾಕಾರಗೊಳ್ಳುವ ಕಲೆಗಳ ಘನತೆ ಹಾಗೂ ಅಸ್ತಿತ್ವಗಳೆರಡನ್ನು ಕಾಯ್ದುಕೊಂಡು ಬರುತ್ತಿರುವುದು ಸಂತಸದ ವಿಷಯ.

ಭೂ ಹಿಡುವಳಿ ರಹಿತ ಗ್ರಾಮೀಣ ಯುವಕರು ನಗರಗಳಿಗೆ ಆಕರ್ಷಿತರಾಗಿ ಕೈಗಾರಿಕೆ, ಕಟ್ಟಡ ನಿರ್ಮಾಣ, ಸೇವಾಕ್ಷೇತ್ರ ಹಾಗೂ ಇನ್ನಿತರ ವಲಯಗಳಲ್ಲಿ ದೊರೆಯುವ ಪರ್ಯಾಯ ಉದ್ಯೋಗಗಳನ್ನು ಅವಲಂಬಿಸಲು ನಗರ ಪ್ರದೇಶಗಳತ್ತ ವಲಸೆ ಹೋಗುತ್ತಿದ್ದಾರೆ. ಇದನ್ನು ತಡೆಗಟ್ಟಲು ಕೃಷಿಯೇತರ ಚಟುವಟಿಕೆಯಾದ ಕರಕುಶಲ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಆರ್ಥಿಕ ಪ್ರಗತಿಯ ಮುನ್ನುಡಿಗೆ ಒತ್ತು ನೀಡಬೇಕು. ಗ್ರಾಮೀಣ ಕುಶಲ ಕಲೆಗಳನ್ನು ಗುರುತಿಸಿ ಅವುಗಳಿಗೆ ಸಹಾಯಧನ ಮತ್ತು ಸಾಲದ ಪೂರೈಕೆ, ಉತ್ಪನ್ನಗಳಿಗೆ ಬೇಡಿಕೆಯನ್ನು ಒದಗಿಸುವಿಕೆ ಮೊದಲಾದವುಗಳು ಅತ್ಯಗತ್ಯವಾಗಿವೆ. ತನ್ಮೂಲಕ ಆಧುನಿಕತೆಗೆ ತೆರೆದುಕೊಂಡು ಕರಕುಶಲಿಗಳು ಸಾಮಾಜಿಕ ಮತ್ತು ಆರ್ಥಿಕವಾಗಿ ಸುಧಾರಿಸುವಲ್ಲಿ ಈ ಕರಕುಶಲ ಕಲೆಗಳ ಉಪಯುಕ್ತತೆ ಮಹತ್ವದ್ದು ಎನಿಸುತ್ತದೆ.

***ISSN (E):2582-225X,* Vol-1 Issue 2, July- August 2019, Pp 55-59**

**ಪರಾಮರ್ಶನಾ ಗ್ರಂಥಗಳು**

೧. **ಪ್ರೊ. ಎ.ವಿ. ನಾವಡ** (ಸಂ) ಕರ್ನಾಟಕ ಸಂಶೋಧನಾ ಜಾನಪದ (೨೦೧೪) ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ರಾಜಾ ಪ್ರಿಂಟರ್ಸ್, ನಂ. ೫೯ , ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ, ಬೆಂಗಳೂರು–೫೬೦೦೨೭.

೨. **ಬೆನಕನಹಳ್ಳಿ ಜಿ.ನಾಯಕ್,** ಕರ್ನಾಟಕದ ಕಲೆಗಳು ಸಂಪುಟ–೩ ಕರಕುಶಲ ಕಲೆಗಳು (೧೯೮೬), ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೫೬೦೦೧೮.

೩. **ಡಾ. ಹೆಚ್.ಆರ್. ಕೃಷ್ಣಯ್ಯಗೌಡ** (ಲೇ) ಕರ್ನಾಟಕ ಆರ್ಥಿಕತೆ (೨೦೧೪) ವಿದ್ಯಾನಿಧಿ ಪ್ರಕಾಶನ, ಸ್ಟೇಷನ್ ರೋಡ್, ಮಹೇಂದ್ರಕರ ಸರ್ಕಲ್ ಹತ್ತಿರ, ಗದಗ–೫೮೨೧೦೧.